

# ಬುದ್ಧಿವಂತ ನರಿ

ಚಿತ್ರ ಮಂಜುನಾಥ ಹುಲಕೊಪ್ಪದ

ಸುರಪುರ ಎಂಬುದೊಂದು ಊರು. ಅದರ ಪಕ್ಕದಲ್ಲಿ ದಟ್ಟ, ದುರ್ಗಮವಾದ ಒಂದು ಕಾಡು. ಅದರಲ್ಲಿ ಅನೇಕ ಕಾಡುಪ್ರಾಣಿ, ಪಕ್ಷಿಗಳು ವಾಸವಾಗಿದ್ದವು. ಸುರಪುರದ ನಿವಾಸಿಗಳು ಆಗೊಮ್ಮೆ, ಈಗೊಮ್ಮೆ ಬೇಟೆ ಆಡಲು ಕಾಡಿಗೆ ಹೋಗಿ, ಬೇಟೆಯಾಡಿದ ಪ್ರಾಣಿಗಳನ್ನು ಊರಿನವರ ಮುಂದೆ ಪ್ರದರ್ಶಿಸುತ್ತಿದ್ದರು. ಅವರ ಗಂಡೆದೆಯನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಿದ್ದರು.

ಕಾಡಿಗೊಂದು ರಾಜನ ಅವಶ್ಯಕತೆ ಇರಲೇಬೇಕಲ್ಲವೇ. ಹಾಗಾಗಿ ಎಲ್ಲಾ ಪ್ರಾಣಿಗಳು ಸೇರಿ ಒಬ್ಬ ರಾಜನನ್ನು ಚುನಾಯಿಸಲು ನಿಶ್ಚಯಿಸಿಕೊಂಡವು. ಎಲ್ಲರಿಗಿಂತ ಬಲಶಾಲಿಯಾದ ಸಿಂಹವನ್ನೇ ತಮ್ಮ ರಾಜನೆಂದು ಘೋಷಿಸಿದವು. ಯಾರನ್ನು ಮಂತ್ರಿಯನ್ನಾಗಿ ಆಯ್ಕೆ ಮಾಡಬೇಕೆಂದು ಎಲ್ಲವೂ ತಲೆ ಕೆಡಿಸಿಕೊಂಡವು. ಬುದ್ಧಿಶಾಲಿಯಾದ ನರಿಯೇ ಈ ಸ್ಥಾನಕ್ಕೆ ಸೂಕ್ತ ಎಂದು ಒಕ್ಕೊರಲಿನಿಂದ ಕೂಗಿದವು. ಎಲ್ಲ ಪ್ರಾಣಿಗಳು ಇಬ್ಬರ ಆಯ್ಕೆಯನ್ನು ಒಪ್ಪಿಕೊಂಡವು. ಬೇಟೆಯಾಡಲು ಬರುತ್ತಿದ್ದ ಸುರಪುರದ ಜನರನ್ನು ರಾಜ ಇತರ ಪ್ರಾಣಿಗಳ ಜೊತೆ ಸೇರಿ ಹೆದರಿಸಿ ಓಡಿಸುತ್ತಿತ್ತು.

ರಾಜನನ್ನು ಮಂತ್ರಿಯು ಯಾವಾಗಲೂ ಹಿಂಬಾಲಿಸುತ್ತಿತ್ತು. ರಾಜನು ತನ್ನ ನಿಯಮ ಮೀರಿ ಬೇರೆ ಪ್ರಾಣಿಗಳನ್ನು ತಿಂದು ಬಿಡುತ್ತಿತ್ತು. ಸಿಂಹಕ್ಕೆ ಯಾವುದಾದರೂ ಆಹಾರ ಸಿಕ್ಕರೆ ಮೊದಲು ತಾನು ಹೊಟ್ಟೆತುಂಬಾ ತಿಂದು, ಉಳಿದುದನ್ನು ಇತರ ಪ್ರಾಣಿಗಳು ತಿನ್ನಬೇಕಿತ್ತು. ಸಿಂಹದ ಈ ಗುಣ ಯಾವ ಪ್ರಾಣಿಗಳಿಗೂ ಇಷ್ಟವಾಗುತ್ತಿರಲಿಲ್ಲ. ಆದರೆ ವಿರೋಧಿಸಲು ಧೈರ್ಯ ಸಾಲದೆ ಮೂಕವಾಗಿದ್ದವು. ತಾವೇಕೆ ಸಿಂಹದ ಎಂಜಲು ತಿನ್ನಬೇಕು ಎಂದು ಎಲ್ಲವೂ ಮುನಿಸಿಕೊಂಡಿದ್ದವು. ಹೇಗಾದರೂ ಮಾಡಿ ರಾಜನಿಗೆ ಬುದ್ಧಿ ಕಲಿಸಲು ನಿಶ್ಚಯಿಸಿದವು. ನರಿ ಅದಕ್ಕಾಗಿ ಉಪಾಯವೊಂದನ್ನು ಹೆಣೆಯುತ್ತಿತ್ತು.

ಅದೃಷ್ಟವಶಾತ್ ಒಂದು ಸುಸಮಯ ಒದಗಿ ಬಂತು. ಕೆಲವೇ ದಿನಗಳಲ್ಲಿ ಸುರಪುರದ ಜನರು ಶಿಕಾರಿಗೆಂದು ಕಾಡಿಗೆ ಬಂದವರು ಒಂದು ಕಾಡೆಮ್ಮೆಯನ್ನು ಕೊಂದರು. ಆದರೆ ಅವರು ಕಡಿಮೆ ಜನರಿದ್ದ ಕಾರಣ ಮರುದಿನ ಬಂದು, ಗಾಡಿಯಲ್ಲಿ ಹಾಕಿಕೊಂಡು ಹೋಗಲು, ಯೋಚಿಸಿ ಎಲ್ಲರೂ ವಾಪಸ್ಸಾದರು. ದೂರದಲ್ಲಿ ಮರೆಯಲ್ಲಿ ನಿಂತು ನೋಡುತ್ತಿದ್ದ ನರಿಗೆ ಅವರ ಯೋಜನೆಗಳು ಗೊತ್ತಾಗಿ, ಸಂತೋಷದಿಂದ ಕುಣಿದು ಕುಪ್ಪಳಿಸಿತು. ಅವರು ಬರಿಗೈಯಲ್ಲಿ ತೆರಳಿದ ಬಳಿಕ ನರಿ ಸಿಂಹದ ಬಳಿಗೆ ಓಡೋಡಿ ಬಂದಿತು.

ಸಿಂಹದ ಬಳಿಗೆ ಬಂದು, ‘ರಾಜಾ, ನಿನಗೊಂದು ಸೊಗಸಾದ ಭೋಜನದ ವ್ಯವಸ್ಥೆ ಮಾಡಿದ್ದೇನೆ ದಯವಿಟ್ಟು ಅಲ್ಲಿಗೆ ಬಂದು ಸ್ವೀಕರಿಸಬೇಕು’. ಎಂದು ಬಿನ್ನಹಿಸಿಕೊಂಡಿತು.

ಸಿಂಹದ ಸಂತೋಷಕ್ಕೆ ಮೇರೆಯೇ ಇಲ್ಲವಾಯಿತು. ‘ಸರಿ, ಈಗಲೇ ಹೊರಡೋಣ. ಎಲ್ಲಿದೆಯೆಂದು ಹೇಳು. ದಾರಿ ತೋರಿಸು’ ಎಂದಿತು.

‘ಅವಸರ ಮಾಡಬೇಡಿ ರಾಜರೇ, ಸೊಗಸಿನೂಟ ನಿಮಗೇ ಮೀಸಲು’ ಎಂದು ಹೇಳುತ್ತಾ ಕಾಡೆಲ್ಲಾ ತಿರುಗಿಸಿ, ತಿರುಗಿಸಿ, ಕಾಡೆಮ್ಮೆ ಸತ್ತುಬಿದ್ದ ಜಾಗಕ್ಕೆ ಕರೆದುಕೊಂಡು ಬಂತು.

ಕಾಡೆಮ್ಮೆಯನ್ನು ನೋಡುತ್ತಲೇ ಬಾಯಲ್ಲಿ ನೀರೂರಿಸಿಕೊಂಡು ಒಮ್ಮೆಲೇ ಅದರತ್ತ ಹಾರಿ, ನೆಗೆದು, ಗಬಗಬ ತಿನ್ನಲಾರಂಭಿಸಿತು. ತಿನ್ನುವ ಭರದಲ್ಲಿ ಅತ್ತಿತ್ತ ನೋಡದೆ ತಿನ್ನುವುದರಲ್ಲೇ ಮಗ್ನವಾಗಿತ್ತು. ನರಿ ದೂರದಲ್ಲಿ ನಿಂತು, ಸಿಂಹವನ್ನೇ ನೋಡುತ್ತಾ ಖುಷಿಪಡುತ್ತಿತ್ತು.

ಸ್ವಲ್ಪ ಹೊತ್ತಿನಲ್ಲೇ ಬೇಟೆಗಾರರು ಕೆಲವಾರು ಜನರೊಂದಿಗೆ ಒಂದು ಗಾಡಿಯಲ್ಲಿ ಬಂದರು. ಇಲ್ಲಿ ನೋಡಿದರೆ ತಮ್ಮ ಬೇಟೆ ಸಿಂಹಕ್ಕೆ ಆಹಾರವಾಗುತ್ತಿದೆ. ಆದರೆ ಅವರಿಗೆ ಬೇಸರವಾಗುವುದರ ಬದಲು ಸಂತೋಷವಾಯಿತು. ತಮ್ಮ ಒಂದು ಬೇಟೆಯ ಜೊತೆಗೆ ಇನ್ನೂ ಒಂದು ಬೇಟೆ ದೊರಕಿತು ಎಂದು ಖುಷಿಯಿಂದ ಗಾಡಿಯಲ್ಲಿದ್ದ ಒಂದು ದೊಡ್ಡ ಬಲೆಯನ್ನು ತಂದು, ಸಿಂಹದ ಹಿಂದಿನಿಂದ ಬಂದು ಬೀಸಿದರು. ಬೇಟೆಗಾರರ ಬಲೆಯಲ್ಲಿ ಸಿಲುಕಿದ ಸಿಂಹ ವಿಲಿವಿಲಿ ಒದ್ದಾಡಿತು. ಜೋರಾಗಿ ಗರ್ಜಿಸಿತು. ಬೇಟೆಗಾರರು ಮತ್ತೆ ತಮ್ಮ ಊರಿಗೆ ಹೋಗಿ, ಜೊತೆಯಲ್ಲಿ ಪ್ರಾಣಿವೈದ್ಯರನ್ನು ಕರೆತಂದರು. ವೈದ್ಯರು ಸಿಂಹಕ್ಕೆ ಮತ್ತು ಬರುವ ಚುಚ್ಚುಮದ್ದನ್ನು ಕೊಟ್ಟರು. ಪ್ರಜ್ಞೆ ಕಳೆದುಕೊಂಡ ಸಿಂಹವನ್ನು ಸರ್ಕಸ್ ಕಂಪನಿಗೆ ಕೊಟ್ಟರೆ ಕೈತುಂಬಾ ಹಣ ಸಿಗಬಹುದೆಂದು ಮನಸ್ಸಿನಲ್ಲೇ ಮಂಡಿಗೆ ಮೆಲ್ಲುತ್ತಾ, ಎಲ್ಲರೂ ಸೇರಿ ಸಿಂಹವನ್ನು ಗಾಡಿಗೆ ಸಾಗಿಸಿದರು.

ಅಹಂಕಾರಿ ಸಿಂಹಕ್ಕೆ ತಕ್ಕ ಶಾಸ್ತಿಯಾಗಿತ್ತು. ಸಿಂಹಕ್ಕೆ ಸರಿಯಾಗಿ ಬುದ್ಧಿ ಕಲಿಸಿದೆ ಎಂಬ ಸಂತೋಷದಲ್ಲಿ ಕುಣಿಯುತ್ತಾ ಎಲ್ಲರಿಗೂ ವಿಷಯ ತಿಳಿಸಲು ಕಾಡಿಗೆ ಓಡಿಹೋಯಿತು. ನರಿಯ ಬುದ್ಧಿವಂತಿಕೆಯನ್ನು ಎಲ್ಲಾ ಪ್ರಾಣಿಗಳೂ ಹಾಡಿ, ಹೊಗಳಿ, ಸಂಭ್ರಮಾಚರಣೆಯನ್ನು ಆಚರಿಸಿದವು.

■ **ಪುಷ್ಪಾ ಎನ್.ಕೆ. ರಾವ್**